

ಚಿತ್ರ: ತಾಜುದ್ದೀನ್ ಆಜಾದ್

ಅವ್ವ ಅದ್ನ ನೋಡಿ 'ಆತು ಇಬ್ರೂ ಪುಗ್ಗಾ ಹಾರಿ ಬಿಟ್ರ್ಯಾ... ಮೊದ್ಲ ಹೇಳಿದ್ದೆ ದಾರನ ಗಟ್ಟಿ ಹಿಡಕೋರಿ ಅಂತ' ಅಂದ್ಲು. ಆವಾಗ ಅಲ್ಲೇ ಬಾಜೂಕ ಆಟಗಿ ಸಾಮಾನು ಮಾರಾಕ ಕುಂತಿದ್ದ ಹೆಣ್ಮಗಳು 'ಈ ಹುಡುಗಿ ಆ ಸಣ್ಣಮಗಿ ಕೈಯಾನ್ ಬಲೂನು ಹಾರಿಬಿಟ್ಟಳು ನೋಡವ್ವ' ಅಂದುಬಿಟ್ಟಳು. ಅವ್ವಗ ಎಲ್ಲಿತ್ತೋ ಏನೋ ಸಿಟ್ಟು ಫಟ್ ಅಂತ ನನ್ನ ಕಪಾಳಕ್ಕೊಂದು ಕೊಟ್ಟಳು ನೋಡ್ರೀ... ದೊಡ್ಡ ಪಾಠ ನಂಗ ಅದು. ಮುಂದೆಂದೂ ತಮ್ಮನ ಆಟಗಿ ಸಾಮಾನಿನ ಉಸಾಬರಿಗೆ ನಾ ಹೋಗಲಿಲ್ಲ.

ಇನ್ನೊಂದ ಸಲಾ ನಮ್ಮ ಓಣಿ ಒಳಗ ಈರಬದ್ರ (ವೀರಭದ್ರ) ದ್ಯಾವರ ಜಾತ್ರಿ ನಡೆದಿತ್ತು... ಅವ್ವ ಎಂದಿನಂತೆ ಜಾತ್ರಿ ಗದ್ದಲದಾಗ ಮನಿ ಕೆಲಸದಾಗ ಮುಳುಗಿದ್ಲು. ಅವತ್ತು ಮನ್ಯಾಗ ಬಂಧು ಬಳಗ ತುಂಬಿದ್ದರು. ಮೂರುಸಂಜಿ ಆದ್ರೂ ನನ್ನ ತಮ್ಮ ಎಲ್ಲೂ ಕಾಣಲಿಲ್ಲ. ಎಲ್ಲಿ ಹೋದ ಇಲ್ಲೇ ಹೊರಗ ಆಡಾಕ ಹತ್ತಿರಬೇಕು ಬರ್ತಾನ ಬಿಡು ಅಂತ ನಾವೆಲ್ಲ ತಿಳಕೊಂಡಿದ್ವಿ. ಮಧ್ಯಾಹ್ನ ಬಾಜುಮನಿ ತನ್ನ ವಾರಗೀ ಹುಡುಗ ಮಹೇಶನ ಜೊತೆಗೆ ಆಡೋದನ್ನು ನಾವು ನೋಡಿದ್ವಿ. ಶುರು ಆತು ನೋಡ್ರೀ ಹುಡುಕಾಟ.

ಮನಿ ಒಳಗಹೊರಗ, ಓಣಿ ಸುತ್ತಾಮುತ್ತಾ, ಆಜುಬಾಜು, ಸಂದಿ ಮೂಲಿ, ಅಟ್ಟದ ಮ್ಯಾಗಕೆಳಗ, ಅಗಲಾಗ ಬಗಲಾಗ, ಕದದ ಹಿಂದಮುಂದ ಎಲ್ಲಾ ಕಡೆಗ ಹುಡುಕಿದರೂ ಪುಟ್ಟ ರಾಜಕುಮಾರನ ಸುಳಿವೇ ಇಲ್ಲ. ನಮ್ಮ ಮನೆಯಿಂದ ಗೌಡರ ಓಣ್ಯಾಗ ಹಾಸಿ, ಚೌರಿ ಬಸವಣ್ಣನ ಗುಡಿ ಮುಂದಕ ಸ್ವಲ್ಪ ಹೋದ್ರ ಒಂದ ಕನ್ನಡಾ ಸಾಲಿ ಇತ್ತು. ಸಾಲಿ ಮುಂದ ದೊಡ್ಡಕ ಬಯಲು ಜಾಗಾ ಆಟ ಆಡಾಕ್ ಭಾಳ ಇಂಬಿತ್ತು. ಅವ್ವ ನಂಗ ಅಲ್ಲಿ ಹೋಗಿ ನೋಡಿ ಬಾ ಅಂತ ಕಳಿಸಿದ್ಲು. ಅಲ್ಲೀತಾಂಕ ಹೋಗಿ ಸಾಲಿ ಬಯಲಾಗ ನಿಂತು ತಮ್ಮನ ಹೆಸರು ಜೋರಾಗಿ ಕೂಗಿ ಕೂಗಿ ಕರೆದು ವಾಪಸ್ ಸಪ್ಪ ಮಾರೀ ಹಾಕ್ಕೊಂಡು ಮನಿಗೆ ಬಂದೆ. ಎಲ್ಲಾರೂ ಹುಡುಕಿ ಹುಡುಕಿ ಸಾಕಾಗಿ ತಲಿಮ್ಯಾಗ ಕೈ ಹೊತ್ಗೊಂಡು ಕೂತ್ವಿ.

ಅವ್ವಗ ಏನು ಅನಸ್ತೋ ಎನೋ ಕುಂತಾಕಿ ಒಮ್ಮಿಂದೊಮ್ಮೆಲೆ ಎದ್ದಾಕೀನ ನನ್ನ ಕೈ ಹಿಡಕೊಂಡು ನಡಿ ಇಂದಾ ಅಂದು, ಉಳಿದವರಿಗೆ ನಾ ಬರ್ತೀನಿ ಜರಾ ನೀವಿಲ್ಲೇ ಇರಿ ಅಂತ ಹೇಳಿ, ಭರಾ ಭರಾ ನಡ್ಕೊಂತಾ ಮತ್ತ ಆದ ಸಾಲಿ ಬಯಲಾಗ ಕರ್ಕೊಂಡು ಹೋದ್ಲು. ಜೋರಾಗಿ ನಾ ಮತ್ತ ನಮ್ಮವ್ವ ಇಬ್ರೂ ಜೋರಾಗಿ 'ಬಾಬು... ಬಾಬು...' ಅಂತ ಕೂಗಿದರೂ ನಮ್ಮ ಧ್ವನಿ ವಾಪಸ್ ನಮಗ್ ಕೇಳಿಸ್ತು ಅಷ್ಟೇ...

ಕೂಗಿ ಕೂಗಿ ಸುಸ್ತಾಗಿ ವಾಪಸ್ ತಿರುಗಿ ಹೋಗಬೇಕು ಅನ್ನೂದ್ರಾಗ ಅವ್ವನ ಕಣ್ಣು ಅಲ್ಲಿಟ್ಟಿದ್ದ ಎರಡು ಕಬ್ಬಿಣದ ದೊಡ್ಡ ದೊಡ್ಡ ಕೊಪ್ಪರಿಗೆಗಳ ಮ್ಯಾಗ ಬಿತ್ತು. ಜಾತ್ರೀಗ ಹುಗ್ಗಿ ಪ್ರಸಾದ ಮಾಡಾಕ ಅಂತ ಸಾಲಿ ಬಯಲಾಗ ಇಟ್ಟಿದ್ರು. ನಾ ಜಿಗ ಜಿಗದು ನೋಡಿದ್ರೂ ನನಗ ಏನೂ ಕಾಣತಿದ್ದಿಲ್ಲ. ಅಷ್ಟು ಬೃಹದಾಕಾರದ ಕಬ್ಬಿಣದ ಕೊಪ್ಪರಿಗೆಗಳು ಅವು. ಅವ್ವ ಅದರ ಒಳಗ ಬಗ್ಗಿ ನೋಡಿದ್ರ... ನನ್ನ ತಮ್ಮ, ಅವನ ಗೆಳೆಯ ಇಬ್ಬರೂ ಮುದುಡಿ ಮಲ್ಕೊಂಡು ಬಿಟ್ಟಾರು... ಹೋದ ಜೀವ ಬಂದಂಗ ಆತು ಅವ್ವನಿಗೆ...

ಇವತ್ತಿಗೂ ಶ್ರಾವಣದಾಗ ಬೆಳಗಾವಿ ಕಣಬರಗಿ ಸಿದ್ಧೇಶ್ವರ ಜಾತ್ರೆಗೆ ಹೋದಾಗ, ಅಲ್ಲಿ ಹುಗ್ಗಿ ಮಾಡಾಕ ಇಟ್ಟ ಕೊಪ್ಪರಿಗೆ ತೋರಿಸಿ ನನ್ನ ತಮ್ಮನ ಮಗಳಿಗೆ 'ನಿಮ್ಮಪ್ಪ ಸಣ್ಣಾವ ಇದ್ದಾಗ ಕಳಕೊಂಡಿದ್ದ' ಅಂತ ಚಾಷ್ಟಿ ಮಾಡ್ಕೋತಾ ಆ ಪ್ರಸಂಗಾನ ಹೇಳ್ತೀನಿ... ಅವಳು ತನ್ನ ಅರಳುಗಣ್ಣುಗಳಿಂದ 'ಹೌದಾ ಅತ್ಯಾ' ಎಂದು ಬೆರಗಿನಿಂದ ಕೇಳುವಾಗ ನಮ್ಮ ಅಕ್ಕ ತಮ್ಮನ ಮೊಗದಲ್ಲಿ ನಮಗರಿವಿಲ್ಲದೇ ಮುಗುಳ್ನಗುವೊಂದು ತೇಲಿ ಮನವನ್ನು ಮುದಗೊಳಿಸುತ್ತದೆ.

ಎಷ್ಟು ಮಧುರ ಮಧುರವೀ ಜಾತ್ರೆಯ ನೆನಪುಗಳು ಅಲ್ಲವೇ... ನಿಮಗೂ ಜ್ಞಪ್ತಿಗೆ ಬಂದಿರಬೇಕಲ್ಲ ಇಂಥಾ ಜಾತ್ರಿಗಳು... ಸರಿ ಮತ್ತ ಹೋಗಿ ಬರ್ತೀನಿ ನಾನು... ಎಲ್ಲಾರಿಗೂ ಶರಣು...

